# ಪತ್ರಿಕಾ ಪ್ರಕಟಣೆ

## ಮನೆ ಕಳವು ಮಾಡಿದ ಕಳ್ಳನನ್ನು ಕೇವಲ 48 ಗಂಟೆಯಲ್ಲಿ ಬಂಧಿಸುವಲ್ಲಿ ಯಶಸ್ವಿಯಾದ ರೋಜಾ ಪೊಲೀಸ್ ಠಾಣೆಯ ಪೊಲೀಸರು.

---

ದಿನಾಂಕ: 09/08/2021 ರಂದು ಹಗಲು ಮನೆ ಕಳ್ಳತನವಾಗಿದ್ದು, ಇದರಲ್ಲಿ ಒಟ್ಟು 21 ಗ್ರಾಂ ಬಂಗಾರದ ಆಭರಣಗಳು ಹಾಗೂ ನಗದು ಹಣ 287000/- ರೂಪಾಯಿಗಳು ಹೀಗೆ ಒಟ್ಟು 348000/- ರೂ ಬೆಲೆಬಾಳುವ ಬಂಗಾರ & ನಗದು ಹಣ ಕಳ್ಳತನವಾಗಿದೆ ಎಂದು ರೋಜಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಇರುತ್ತದೆ.

ಪ್ರಕರಣವನ್ನು ಬೇಧಿಸಲು ರೋಜಾ ಪೊಲೀಸ್ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದು ,ಇಂದು ದಿನಾಂಕ: 11/08/2021 ರಂದು ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಮನೆ ಕಳವು ಪ್ರಕರಣದ ಆರೋಪಿತನ ಪತ್ತೆ ಕಾರ್ಯಾಚರಣೆ ಕೈಗೊಂಡು ಹಾಗರಗಾ ಕ್ರಾಸ್ ಹತ್ತಿರ, ಗೌಸ್ ಪಟೇಲ್ ತಂದೆ ಮಕ್ಬೂಲ್ ಪಟೇಲ್ ವಯಾ: 24ವರ್ಷ ಉ: ವಿದ್ಯಾರ್ಥಿ (ಎಮ್.ಬಿ.ಎ) ಸಾ: ಪಾಶಾಪೂರ ರೋಜಾ ಕಲಬುರಗಿ ಈತನನ್ನು ಹಿಡಿದುಕೊಂಡು , ಈತನು ತನ್ನ ಮನೆಯಲ್ಲಿಯೇ ಇಟ್ಟಿದ್ದ 21 ಗ್ರಾಂ ಬಂಗಾರದ ಆಭರಣಗಳನ್ನು ಹಾಗೂ 287000/- ರೂ ನಗದು ಹಣ ಕಳ್ಳತನ ಮಾಡಿದ್ದು, ಆರೋಪಿ ಗೌಸ್ ಪಟೇಲ್ ಈತನಿಂದ 21 ಗ್ರಾಂ ಬಂಗಾರದ ಆಭರಣಗಳನ್ನು ಹಾಗೂ 2,87,000/- ರೂ ನಗದು ಹಣ ಹೀಗೆ ಒಟ್ಟು 3,48,000/- ರೂ ಮೌಲ್ಯದ ಬಂಗಾರದ ಆಭರಣಗಳು & ನಗದು ಹಣ ಜಪ್ತಿಪಡಿಸಿಕೊಂಡಿದ್ದು ಇರುತ್ತದೆ.

ಮನೆ ಕಳ್ಳತನ ಮಾಡಿದ ಆರೋಪಿತನನ್ನು ಬಂಧಿಸಲು, ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ , ಮಾನ್ಯ ಉಪ ಪೊಲೀಸ್ ಆಯುಕ್ತರು (ಕಾ&ಸು) & (ಅ&ಎ) ಹಾಗೂ ಮಾನ್ಯ ಸಹಾಯಕ ಪೊಲೀಸ್ ಆಯುಕ್ತರು (ಬಿ) ಉಪವಿಭಾಗ ರವರ ಮಾರ್ಗದರ್ಶನದಲ್ಲಿ , ಶ್ರೀ ಎಸ್.ಅಸ್ಲಾಂಬಾಷ ಪಿಐ ರೋಜಾ ಠಾಣೆ ಹಾಗೂ ಸಿಬ್ಬಂದಿಯವರಾದ ಶ್ರೀ ಶಿವಪ್ಪ ಕಮಾಂಡೋ, ಶ್ರೀ ರಫೀಕ, ಶ್ರೀ ಗೋಪಾಲ , ಶ್ರೀ ಮದರಸಾಬ, ಶ್ರೀ ನಿತ್ಯಾನಂದ, ಶ್ರೀ ಈರಣ್ಣ, ಶ್ರೀ ಶರಣು ಸಲಗರ, ಶ್ರೀ ಶರಣಬಸಪ್ಪ ಜವಳಿ, ಶ್ರೀ ಮೇಘರಾಜ ಇವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿತನನ್ನು ಬಂಧಿಸುವಲ್ಲಿ ಯಶಸ್ವೀಯಾಗಿರುತ್ತಾರೆ.